# ರಿಚಾ ಪೋಸ್ಟರ್ ಪ್ರಹಸನ

■ ವಿಶಾಖ ಎನ್.

ಮನರಂಜನಾ ಮಾಧ್ಯಮ ಮಾತನಾಡತೊಡಗಿದೆ. ಜನ ಕೂಡ ಭಾವುಕರಾಗಿಯೋ, ಅತಿ ಭಾವುಕರಾಗಿಯೋ ಥಟ್ಟನೆ ಪ್ರತಿಕ್ರಿಯೆ ನೀಡುವ ವಿಷಯದಲ್ಲಿ ಹಳಿಗೆ ಮರಳಿದ್ದಾರೆ. ಜನವರಿ 22ರಂದು ತೆರೆಕಾಣಲು ಸಿದ್ಧವಿದ್ದ 'ಮೇಡಂ ಚೀಫ್ ಮಿನಿಸ್ಟರ್' ಚಿತ್ರದ ಪೋಸ್ಟರನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ಕೈಯಲ್ಲಿ ಪೊರಕೆ ಹಿಡಿದು, ಬಾಯ್ ಕಟ್ ಮಾಡಿಸಿಕೊಂಡ ಹೆಣ್ಣುಮಗಳು ಮುಖದ ತುಂಬಾ ಕೋಪಾವೇಶ ತುಂಬಿಕೊಂಡು ನಿಂತ ಭಂಗಿಯ ಪೋಸ್ಟರ್ ಅದು. ನಾಯಕಿ ರಿಚಾ ಚಡ್ಡಾ ಈ ಪೋಸ್ಟರನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದರು. ಅದಕ್ಕೆ ಬಂದ ಪ್ರತಿಕ್ರಿಯೆಗಳನ್ನು ಕಂಡು ಕೆಲವೇ ಗಂಟೆಗಳಲ್ಲಿ ಕಳವಳಗೊಂಡರು.

'ಮೇಲ್ಜಾತಿಯ ಹೆಣ್ಣುಮಗಳ ಕೈಲಿ ಕೆಳಜಾತಿಯ ಹುಡುಗಿಯ ಪಾತ್ರವನ್ನು ಯಾಕೆ ಮಾಡಿಸಿದ್ದೀರಿ' ಎನ್ನುವುದು ಕೆಲವರ ಪ್ರಶ್ನೆ. ಪೊರಕೆಯನ್ನು ಕೈಗಿತ್ತು, ದಲಿತರು–ದಮನಿತರ ಸಮಸ್ಯೆಯನ್ನು ಸರಳೀಕರಿಸಿದ್ದೀರಿ ಎಂದು ಇನ್ನು ಕೆಲವರು ತಕರಾರು ತೆಗೆದರು.

ಜನವರಿ 15ರಂದು ರಿಚಾ ವಿಧಿಯಿಲ್ಲದೆ ಪೋಸ್ಟರ್‌ಗೆ ಉದ್ದದ ಪ್ರತಿಕ್ರಿಯೆ ಬರೆಯಬೇಕಾಯಿತು. 'ತಮಗೆ ಇದೊಂದು ಕಲಿಕಾನುಭವ. ಯಾರದ್ದೋ ಭಾವನೆಗಳಿಗೆ ಧಕ್ಕೆ ತರಲೆಂದೋ, ಪ್ರಚೋದಿಸಲೆಂದೋ ಇಂತಹ ಪೋಸ್ಟ್ ಹಾಕಿಲ್ಲ. ಸಿನಿಮಾದ ಪಾತ್ರವಾಗಿ ಅದಕ್ಕೆ ತಕ್ಕಂತೆ ಪೋಸ್ಟರ್ ರೂಪಿಸುತ್ತಾರೆ. ಭಾವ–ಭಂಗಿಯಷ್ಟೇ ತಮ್ಮದು' ಎಂದು ಅವರು ಸಮಜಾಯಿಷಿ ಕೊಟ್ಟರು. ಪೋಸ್ಟರ್ ವಿನ್ಯಾಸ ಮಾಡುವಲ್ಲಿ ತಮ್ಮ ಸಲಹೆಯೇನೂ ಇರಲಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಕೊನೆಗೆ ಚಿತ್ರತಂಡ ಆ ಪೋಸ್ಟರ್ ಅನ್ನು ಬದಲಾಯಿಸಿದ್ದೂ ಆಯಿತು. ಸುಭಾಷ್ ಕಪೂರ್ ನಿರ್ದೇಶನದ 'ಮೇಡಂ ಚೀಫ್ ಮಿನಿಸ್ಟರ್'ನಲ್ಲಿ ರಿಚಾ ಅವರು ತಾರಾ ಎಂಬ ಪಾತ್ರವನ್ನು ನಿರ್ವಹಿಸಿದ್ದಾರೆ. ರಾಜಕೀಯ ಪಿತೂರಿಗಳ ನಡುವೆ ನಲುಗಿ, ಸಿಡಿದೇಳುವ ಗಟ್ಟಿಗಿತ್ತಿಯ ಪಾತ್ರ ಇದು. 'ಈ ಸಿನಿಮಾ ತಮ್ಮ ವೃತ್ತಿಬದುಕಿನಲ್ಲಿ ತುಂಬಾ ಮಹತ್ವಾಕಾಂಕ್ಷೆ ಮೂಡಿಸಿದೆ' ಎಂದೂ ಅವರು ಹೇಳಿಕೊಂಡಿದ್ದಾರೆ.

'ಇದುವರೆಗೆ ನಾನು ತಾರಾ ಪಾತ್ರದೊಳಗೆ ಪರಕಾಯ ಪ್ರವೇಶ ಮಾಡಿದ್ದೆ. ಅದು ತೆರೆಕಾಣಲು ಸಜ್ಜಾಗಿರುವುದರಿಂದ ಅದಕ್ಕೆ ಗುಡ್‌ಬೈ ಹೇಳಬೇಕಿದೆ. ತಾರಾ ಇನ್ನು ನಿಮ್ಮವಳು' ಎಂದು ಅವರು ಭಾವುಕರಾಗಿ ಬರೆದದ್ದಕ್ಕೂ ಕೆಲವರು ಕುಹಕದ ಪ್ರತಿಕ್ರಿಯೆಗಳನ್ನು ನೀಡಿದ್ದಾರೆ. ಅವನ್ನೆಲ್ಲ ಜೀರ್ಣಿಸಿಕೊಳ್ಳುವಷ್ಟು ಮನಶ್ಶಕ್ತಿ ಈಗ ಅವರಿಗೆ ಸಿಕ್ಕಿದೆ. ■





# 'ತಾಂಡವ್' ತಕರಾರು

ಧರ್ಮ ಹಾಗೂ ಸಮಕಾಲೀನ ರಾಜಕೀಯ ಕಥಾವಸ್ತುಗಳು ಒಟಿಟಿ ವೇದಿಕೆಗಳಲ್ಲಿ ಮಾರುಕಟ್ಟೆ ಸೃಷ್ಟಿಸಿಕೊಳ್ಳುತ್ತಿವೆ. ಬಹು ನಿರೀಕ್ಷಿತ 'ತಾಂಡವ್' ವೆಬ್ ಸರಣಿಯು ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಿದ್ದು, ರೈತರ ಚಳವಳಿ ಹಾಗೂ ವಿದ್ಯಾರ್ಥಿಗಳ ಹೋರಾಟದ ಕಥನದ ಮೇಲೆ ಬೆಳಕು ಚೆಲ್ಲಿದೆ. 2019ರಲ್ಲಿ ನವದೆಹಲಿಯ ಜೆಎನ್‌ಯುನಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆ ಪ್ರಕರಣದ ರಾಜಕೀಯ ಸೂಕ್ಷ್ಮಗಳನ್ನು ಈ ವೆಬ್ ಸರಣಿ ವಿದ್ಯಾರ್ಥಿಗಳ ಪರವಾದ ಧ್ವನಿಯ ಮೂಲಕ ಹೇಳಿದೆ. ಚಳವಳಿನಿರತ ರೈತರ ಮೇಲೆ ಪೊಲೀಸರು ದಾಳಿ ಇಡುವ ದೃಶ್ಯಗಳೂ ಇದರಲ್ಲಿ ಇವೆ. ಇಷ್ಟು ನೇರಾನೇರವಾಗಿ ರಾಜಕೀಯ ಟೀಕಾಧ್ವನಿಯನ್ನು ಹೊರಡಿಸುವ ಸ್ವಾತಂತ್ರ್ಯ ಒಟಿಟಿಯಲ್ಲಿ ಇದೆ. ಈ ಪ್ರಸಂಗಗಳನ್ನು ನೋಡಿ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ.

ಕೇಂದ್ರ ಸರ್ಕಾರದ ನಿಲುವುಗಳನ್ನು ಸಮರ್ಥಿಸಿಕೊಳ್ಳುವವರು ಈ ವೆಬ್ ಸರಣಿಯನ್ನು 'ಗಲೀಜು' ಎಂದು ಟೀಕಾಪ್ರಹಾರ ಮಾಡುತ್ತಿದ್ದಾರೆ. ಮೊಹಮ್ಮದ್ ಜೀಶನ್ ಅಯೂಬ್ ನಿರ್ವಹಿಸಿರುವ ಪಾತ್ರ ಕನ್ಹಯ್ಯ ಕುಮಾರ್ ನಿಜಬದುಕನ್ನು ಹೋಲುತ್ತದೆ ಎಂದು ಅನೇಕರು ಗದಾಪ್ರಹಾರ ಮಾಡಿದ್ದಾರೆ. ಮತ್ತೊಂದಿಷ್ಟು ಜನ ನಿರ್ದೇಶಕರ ಧರ್ಮ ಹಿಡಿದು ಜರೆದಿದ್ದಾರೆ.

ಅಲಿ ಅಬ್ಬಾಸ್ ಜಫರ್ 'ತಾಂಡವ್' ವೆಬ್ ಸರಣಿಯ ನಿರ್ದೇಶಕ. 'ಗುಂಡೆ', 'ಸುಲ್ತಾನ್', 'ಭಾರತ್' ತರಹದ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದ ಅನುಭವವನ್ನು ಬೆನ್ನಿಗಿಕ್ಕಿಕೊಂಡಿರುವ ಅವರು ವೆಬ್ ಸರಣಿಯ ಮೂಲಕ ತಮ್ಮ ಸೂತ್ರವನ್ನೇ ಬದಲಿಸಿದ್ದಾರೆ. 'ತಾಂಡವ್' ವೆಬ್ ಸರಣಿಯಲ್ಲಿ ಸೈಫ್ ಅಲಿ ಖಾನ್ ಹಾಗೂ ಡಿಂಪಲ್ ಕಪಾಡಿಯಾ ತರಹದ ಮಾಗಿದ ನಟ–ನಟಿಯರೂ ಅಭಿನಯಿಸಿದ್ದಾರೆ. ■